ಒ.ಎಸ್. ನಂ.96/2016
ಪಿಡಬ್ಲು-1

ದಿನಾಂಕ 08.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ವಾಟಿ ಸವಾಲುಃ ವಾದಿ ಪರ ವಕೀಲರಿಂದ</u>

OS-95/2016 ನ್ನು 1 ರಿಂದ 7ನೆ ಪ್ರತಿವಾದಿಯರು ಪ್ರಸ್ತುತ ನನ್ನ ಹಾಗೂ 8ನೆ ಪ್ರತಿವಾದಿಯ ವಿರುದ್ದ ದಾವೆ ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ನಿಜ. ಸದರಿ ದಾವೆ ಯಾವ ಕಾರಣಕ್ಕೆ ವಜಾಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ OS-95/2016 ನ್ನು ಘೋಷಣೆ ಮತ್ತು ನಿರ್ಬಂಧಕಾಜ್ಞೆ ಕುರಿತು ಸಲ್ಲಿಸಿದ್ದೆವು ಎಂದರೆ ನಿಜ. ಸದರಿ ದಾವೆಯನ್ನು ನಾವು ನಡೆಸಿಲ್ಲ ಎಂದರೆ ನಿಜ. ಸೈಯದ ಹುಸೇನಸಾಬ, ಸೋಪಿಸಾಬ, ರಾಜಾಸಾಬರವರು ನನ್ನ ಅಜ್ಜಂದಿರು.

ದಿನಾಂಕ 11.11.1959 ರಲ್ಲಿ ರಾಜಸಾಬರವರಿಗೆ ಸರ್ವೆ ನಂ.37 ಸರಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆ ಖಾಸಿಮಸಾಬಗೆ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ಈ ಕುರಿತು ಯಾವುದೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸೋಪಿಸಾಬನ ತಂದೆ ಹೆಸರು ಖಾಸಿಮಸಾಬ ಇರುತ್ತದೆ. ಸದರಿ ಖಾಸಿಮಸಾಬ ತಂದೆ ಹೆಸರು ಸೈಯದ ಹುಸೇನ ಇದೆ. ದಾವಾ ಸ್ವತ್ತು ನಿಜಾಮರ ಕಾಲದಿಂದಲೂ ನಮ್ಮ ಹಿರಿಯರಿಗೆ ಆಗಿದೆ ಎಂದರೆ ಸಾಕ್ಷಿ ನಮ್ಮ ತಂದೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಜಮೀನು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಸಿಮಸಾಬ ಮತ್ತು ಸೋಪಿಸಾಬರವರು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ತಂದೆಯೇ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸೋಪಿಸಾಬನ ಹೆಂಡತಿಯ ಹೆಸರು ಲಾಲಬಿ ಎಂದರೆ ನಿಜ. ಸದರಿ ಸೋಪಿಸಾಬ ತನ್ನ ಹೆಂಡತಿಗೆ 04-ಎಕರೆ ಜಮೀನು ಮರಣ ಪತ್ರ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ರಾಜಾಸಾಬ ಮತ್ತು ಸೋಪಿಸಾಬನಿಗೆ ಅವರ ಹಿರಿಯರಿಂದ ಬಂದ ಆಸ್ತಿಗಳಾಗಿರುತ್ತವೆ ಎಂದರೆ ಸಾಕ್ಷಿ ನನ್ನ ತಂದೆಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಖಾಸಿಮಸಾಬ ಮತ್ತು ಸೋಪಿಸಾಬರವರು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದರು ಆದರೆ ನನ್ನ ತಂದೆಯೆ ಸಾಗುವಳಿ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ

ತಂದೆ ಕುಟುಂಬದ ನಾತೆಯಿಂದ ಸಾಗುವಳಿ ಮಾಡುತ್ತಿದ್ದ ಎಂದರೆ ನನ್ನ ತಂದೆ ವೈಯಕ್ತಿಕ ಸಾಗುವಳಿ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ತಂದೆ ವೈಯಕ್ತಿಕ ಸಾಗುವಳಿ ಮಾಡುತ್ತಿದ್ದ ಬಗ್ಗೆ ದಾಖಲೆಗಳಿವೆಯೆ ಎಂದರೆ ಸಾಕ್ಷಿ ದಾಖಲೆಗಳಿವೆ ಎಂದು ನುಡಿಯುತ್ತಾರೆ. ಈ ಕುರಿತು ನಾನು ಪಹಣಿಗಳನ್ನು ಹೊರತುಪಡಿಸಿ ಬೇರೆ ಯಾವುದೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

OS No.95/2016 ನ್ನು ನಾವು ಮಾಲಿಕರು ಹಾಗೂ ಕಬ್ಜೆದಾರರೆಂದು ಮಾತ್ರ ದಾಖಲಿಸಿರುತ್ತೇವೆ ಆದರೆ ದಾವಾ ಆಸ್ತಿಯು ಯಾವ ರೀತಿ ಬಂದಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನ ತಾಯಿ ಭಾಗಶಃ ಆಸ್ತಿಯನ್ನು ಪಾಲು ಮಾಡಿದ ಕಾರಣ ನಮ್ಮ ಕೇಸಿಗೆ ಅನಾನುಕೂಲವಾಗುತ್ತದೆ ಎಂದು ನಾವು ಸದರಿ ದಾವೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ, ನನ್ನ ಚಿಕ್ಕಪ್ಪ ದಾವಲಸಾಬ ಮತ್ತು ನಬಿಸಾಬರವರು ದಾವಾ ಸ್ವತ್ತನ್ನು ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ದಾವಲಸಾಬ ಮತ್ತು ನಬಿಸಾಬರವರೆ ಪಹಣಿಗಳನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಾಯಿ ಖಾಜಾಬಿ 13-ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ನನ್ನ ತಾಯಿಯ ವಿರುದ್ದ ನಾನು ದಾವೆ ಸಲ್ಲಿಸಿಲ್ಲ. ನನಗೆ ದಾವಾ ಸ್ವತ್ತು ಉಳಿಕೆ ಸ್ವತ್ತಿನಿಂದ (residuary) ಬಂದಿದ್ದು ಎಂದರೆ ಸರಿಯಲ್ಲ.

<u>ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ